# 1ನೇ ಹೆಚ್ಚುವರಿ ದಿವಾಣಿ ನ್ಯಾಯಾಲಯ ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಅಥಣಿ

---

ಸಿ.ಸಿ.ನಂ :3864/18
ಸಿ. ಡಬ್ಲ್ಯೂ : 4
ಪಿಡಬ್ಲ್ಯೂ : 3

---

| | |
|---|---|
| ಸಾಕ್ಷಿದಾರರ ಹೆಸರು | : ಅಶೋಕ ಸಿದ್ದಲಿಂಗಪ್ಪ ಹುಲಸದಾರ |
| ವಯಸ್ಸು | : 41 ವರ್ಷ |
| ಉದ್ಯೋಗ | : ಪೇದೆ |
| ವಾಸಸ್ಥಳ | : ಗೋಕಾಕ |
| ದಿನಾಂಕ | : 24/10/2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

---

* * *

**ಮುಖ್ಯ ವಿಚಾರಣೆ ಸಸಅ ರವರಿಂದ:**

ನಾನು 6.7.2015 ರಿಂದ 21.3.2019ರ ವರೆಗೆ ಐಗಳಿ ಪೊ.ಠಾಣೆಯಲ್ಲಿ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.25.9.2018ರಂದು ಸಂಜೆ ಸುಮಾರು 6.45ರ ಸಮಯದಲ್ಲಿ ಚಾಸಾ 1 ರವರಿಗೆ ಬಂದ ಖಚಿತ ಮಾಹಿತಿ ಆದಾರದ ಮೇಲೆ ನಾನು ಮತ್ತು ಚಾಸಾ 5, 6 ರವರು ಚಾಸಾ 1 ರವರೊಂದಿಗೆ ಐಗಳಿ ಹಳ್ಳದ ಹತ್ತಿರ ಇರುವ ಒಂದು ಪಾನ ಶಾಪನಲ್ಲಿ ಆರೋಪಿತನು ಮದ್ಯ ಮಾರಾಟ ಮಾಡುತ್ತಿದ್ದಾನೆಂದು ಬಂದ ಮಾಹಿತಿಯಂತೆ ನಾವು ಮತ್ತು ಪಂಚ ಸಾಕ್ಷಿದಾರರೊಂದಿಗೆ ಅಲ್ಲಿಗೆ ಹೋಗಿ ನೋಡಲಾಗಿ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಆರೋಪಿ ಓಡಿ ಹೋಗಿರುತ್ತಾನೆ. ಆತನನ್ನು ಬೆನ್ನಟ್ಟಿ ಹಿಡಿಯಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ನಂತರ ನಾವು ಪಂಚರ ಸಮಕ್ಷಮ ಸದರಿ ಅಂಗ ಡಿ ತಪಾಸಣೆ ಮಾಡಿ ನೋಡಲಾಗಿ ಅಂಗಡಿ ಒಳಗೆ ಒಂದು ಕೈಚೀಲದಲ್ಲಿ 90 ಎಮ ಎಲ ನ ಬಾಗಪೈಪರ 40 ಟೆಟ್ರಾಪಾಕೀಟಗಳಿದ್ದವು. ಅವುಗಳನ್ನು ಪಂಚರ ಸಮಕ್ಷಮ ಮಹಜರ ಜರುಗಿಸುವ ಮೂಲಕ ಜಪ್ತಪಡಿಸಿಕೊಂಡು ಅವುಗಳಿಂದ 2 ಟೆಟ್ರಾಪಾಕೇಟಗಳನ್ನು ರಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕ ತೆಗೆದು ಬಳಿ ಬಟ್ಟೆ ಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಸೀಲನಿಂದ ಸೀಲ ಮಾಡಿರುತ್ತೇವೆ. ನಂತರ ಜಪ್ತಪಡಿಸಿಕೊಂಡ ಮು ಮಾಲಿನೊಂದಿಗೆ ಠಾಣೆಗೆ ಮರಳಿದ್ದು ಚಾಸಾ 1 ರವರು ಠಾಣಾದಿಕಾರಿಗೆ ದೂರು ನೀಡಿರುತ್ತಾರೆ. ಈ ಕುರಿತು ನಾನು ತನಿಖಾದಿಕಾರಿ ಮುಂದೆ ಹೇಳಿಕೆ ನೀಡಿರುತ್ತೇನೆ. ರಸಾಯನಿಕ ಪರೀಕ್ಷೆಗಾಗಿ ಕಳಿಸಿಲಾದ 2 ಟೆಟ್ರಾಪಾಕೇಟಗಳನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು ಅವುಗಳನ್ನು ಗುರುತಿಸುತ್ತೇನೆ. ಅವುಗಳನ್ನು ಮು ಮಾ 1 ಮತ್ತು 2 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರುಹಾಜರಿದ್ದು , ಹಾಜರಾತಿ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದ್ದು, ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರಿಂದ ಯಾವುದೇ ತಕರಾರು ಇಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು**

ಈ ಪ್ರಕರಣದಲ್ಲಿನ ದೂರುದಾರ ನಮ್ಮ ಮೇಲದಿಕಾರಿ ಎಂದರೆ ಸರಿ . ದೂರಿನಲ್ಲಿ ಘಟನೆಯ ದಿನಾಂಕ 25.6.2018 ಎಂದು ನಮೂದಿಸಲಾಗಿದೆ ಎಂದರೆ ಸರಿ . ಘಟನಾಸ್ಥಳದ ಪಾನಶಾಪ ಅಕ್ಕಪಕ್ಕದಲ್ಲಿ ಸಾಕಷ್ಟು ಅಂಗಡಿಗಳಿವೆ ಎಂದರೆ ಸರಿ . ವಾಸದ ಮನೆಗಳಿವೆ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋದಾಗ ಅನೇಕ ಸಾರ್ವಜನಿಕರು ಇದ್ದರು ಎಂದರೆ ಸರಿ . ಸದರಿಯವರ ಹೇಳಿಕೆಗಳನ್ನು ತೆಗೆದುಕೊಂಡಿಲ್ಲ ಎಂದರೆ ಸರಿ . ಆರೋಪಿ ಬಗ್ಗೆ ಸ್ಥಳದಲ್ಲಿದ್ದ ಸಾರ್ವಜನಿಕರು ಮಾಹಿತಿ ನೀಡಿರುತ್ತಾರೆ. ಆರೋಪಿಗೆ ಈಗ ಸುಮಾರು 60 ವರ್ಷ ವಯಸ್ಸಾಗಿದೆ ಎಂದರೆ ಇರಬಹುದು. ನಾವು ಆರೋಪಿಯನ್ನು ಹಿಡಿಯುವ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿ ಇದ್ದ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಪಂಚ ಸಾಕ್ಷಿದಾರರನ್ನು ನನ್ನ ಸಹೋದ್ಯೋಗಿ ಚಾಸಾ 5 ರವರು ಕರೆಸಿರುತ್ತಾರೆ. ನನ್ನ ಹೇಳಿಕೆಯಲ್ಲಿ ಸದರಿ ಪಂಚರನ್ನು ನಾನೇ ಹಾಜರುಪಡಿಸಿದ್ದೇನೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಮು ಮಾ ನಂತಹ ಟೆಟ್ರಾಪಾಕೇಟಗಳು ಸಾಮಾನ್ಯವಾಗಿ ಎಲ್ಲ ವೈನಶಾಪ ಬಳಿ ಸಿಗುತ್ತವೆ ಎಂದರೆ ಸರಿ . ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿಅಂಶಕ್ಕಾಗಿ ಆರೋಪಿ ವಿರುದ್ದ ವಿನಾಕಾರಣ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಚಾಸಾ 1 ರವರ ಹೇಳಿಕೆಯಂತೆ ಹಾಗೂ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಇದೆ

(ಓಂಕಾರಮೂರ್ತಿ ಹೆಚ್)
1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ